ಆದನ್ನು ಬಿಡಬೇಕು. ನಮ್ಮ ರಾಜ್ಯದ ಹಿತಕ್ಕೆ ಧಕ್ಕೆ ತರುವ ರೀತಿಯಲ್ಲಿ ಯಾರಿಗೂ ನೀರನ್ನು ದಯಾದಾಕ್ಷಿಣ್ಯಕ್ಕೋಸ್ಕರ ಕೊಡುತ್ತಾ ಇಲ್ಲ ಎಂದು ಇಷ್ಟು ಮಾತ್ರ ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೆಗೌಡ.—ಎಷ್ಟು ನೀರನ್ನು ಬಿಟ್ಟಿದ್ದೀರಿ.

SRI CHANNABASAPPA.—Just now it has been passed on to me. I have no objection to give the actual figures.

Re : Levy of Taxes in the State,

Statement by the Minister for finance

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ತಮ್ಮ ಒಪ್ಪಿಗೆಗಾಗಿ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಈ ಶಾಸನ ಸಭೆ ಪ್ರಾರಂಭವಾಗುವುದಕ್ಕಿಂತ ಮೊದಲು ಕೇಂದ್ರ ಸರ್ಕಾರ ದೇಶದಲ್ಲಿರತಕ್ಕ ಎಲ್ಲ ರಾಜ್ಯ ಸರ್ಕಾರಗಳಿಗೂ ಕೂಡ ಜಾಸ್ತಿ ತೆರಿಗೆಗಳನ್ನು ಜನತೆಯ ಮೇಲೆ ಹಾಕುವುದಕ್ಕೆ ಆದೇಶ ಕೊಟ್ಟಿದ್ದಾರೆಂದು ಪತ್ರಿಕೆಯಲ್ಲಿ ಬಂದಿತ್ತು. ಈ ವಿಷಯವನ್ನು ಆಂಧ್ರ ಪ್ರದೇಶದ ಶಾಸನ ಸಭೆಯಲ್ಲೂ ಕೂಡ ಪ್ರಮುಖವಾಗಿ ಪ್ರಸ್ತಾಪ ಮಾಡಿದ್ದಾರೆ. ಬೇರೆ ರಾಜ್ಯಗಳ ಶಾಸನ ಸಭೆಗಳಲ್ಲೂ ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ರಾಜಾಸ್ಯಂಗದಲ್ಲಿರತಕ್ಕ ಹಕ್ಕುಗಳ ಪ್ರಕಾರ, ಸರ್ಕಾರ ಯಾವ ವಿಷಯಗಳ ಮೇಲೆ ತೆರಿಗೆ ಹಾಕಬಹುದು, ರಾಜ್ಯ ಸರ್ಕಾರ ಯಾವುದರ ಮೇಲೆ ತೆರಿಗೆಗಳನ್ನು ಹಾಕಬಹುದು ಎಂದು ಸ್ಪಷ್ಟವಾಗಿ ಇದೆ. ಈ ಸಂದರ್ಭದಲ್ಲಿ, ಕೇಂದ್ರ ಸರ್ಕಾರ, ಈ ರೀತಿ ಆದೇಶವನ್ನು ರಾಜ್ಯ ಸರ್ಕಾರಗಳಿಗೆ ಕಳುಹಿಸಿರುವುದರಿಂದ, ಯಾವ ಪರಿಸ್ಥಿತಿ ಬರುತ್ತದೆ ಎಂದರೆ our State Government is almost reduced to the status of a municipality. ಕೇಂದ್ರ ಸರ್ಕಾರದವರು, ಟ್ಯಾಕ್ಸ್ ಹಾಕಿ ಎಂದು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಹೇಳಿದರೆ, ಹಾಕಬೇಕು, ಬೇಡ ಎಂದರೆ ಬಿಡಬೇಕು. ಈ ದೃಷ್ಟಿಯಿಂದ ಇದು ಸಣ್ಣ ವಿಷಯವಲ್ಲ ಏಕೆಂದರೆ, ಇದು ನಮ್ಮ ರಾಜ್ಯ ಸರ್ಕಾರಕ್ಕೆ ಇರತಕ್ಕ ಹಕ್ಕನ್ನು ಕಿತ್ತು ಹಾಕತಕ್ಕ ಪ್ರಶ್ನೆ. ಕೇಂದ್ರ ಸರ್ಕಾರದವರಿಗೆ ಎಷ್ಟು ಅಧಿಕಾರ ಇದೆಯೋ ಅಷ್ಟು ಮಾತ್ರ ಪ್ರಯೋಗ ಮಾಡಬೇಕು. ಅದನ್ನು ಮೀರಿ ಹೋಗುವುದಕ್ಕೆ ಬರುವುದಿಲ್ಲ. ಈ ದೃಷ್ಟಿಯಿಂದ ಇದು ಬಹಳ ಮುಖ್ಯವಾದಂಥ ಪ್ರಶ್ನೆ. ಕೇಂದ್ರ ಸರ್ಕಾರದವರಿಂದ ಈ ರೀತಿ ರಾಜ್ಯಸರ್ಕಾರಗಳಿಗೆ ಆದೇಶ ಬಂದಿದೆಯೋ ? ಹಾಗೆ ಬಂದಿದ್ದರೆ, ರಾಜ್ಯ ಸರ್ಕಾರದವರು ಅದಕ್ಕೆ ಏನು ಉತ್ತರವನ್ನು ಕೊಟ್ಟಿದ್ದಾರೆ ಒಂದು ವೇಳೆ ತೆರಿಗೆ ಹಾಕುವ ಹಾಗಿದ್ದರೆ, ಎಷ್ಟು ಹೆಚ್ಚಿಗೆ ಹಾಕುತ್ತೀರಿ ಎಂಬ ಬಗ್ಗೆ ದಯವಿಟ್ಟು ತಿಳಿಸಬೇಕು.

†ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ತಮಗೆ ಗೊತ್ತಿರುವಂತೆ, ಕೇಂದ್ರ ಸರಕಾರದವರು ಕಾನ್‌ಸ್ಟಿಟ್ಯೂಷನ್ ಪ್ರಕಾರ ಯಾವ ರಾಜ್ಯ ಸರಕಾರಗಳಿಗೂ ಈ ರೀತಿ ಟ್ಯಾಕ್ಸೇಷನ್ ಸಂಬಂಧದಲ್ಲಿ ಆದೇಶ ಕೊಡುವ ಹಾಗಿಲ್ಲ. ಅಂತಹ ಆದೇಶವನ್ನು ಕೇಂದ್ರ ಸರಕಾರದವರು ರಾಜ್ಯ ಸರಕಾರಗಳಿಗೆ ಕೊಟ್ಟಿಲ್ಲ. ಈಗ ದೇಶದಲ್ಲಿರತಕ್ಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಎಲ್ಲೆಲ್ಲಿ ಉಳಿತಾಯ ಮಾಡಲಿಕ್ಕೆ ಸಾಧ್ಯ, ಎಲ್ಲೆಲ್ಲಿ ಆದಾಯ ಹೆಚ್ಚಿಸಲಿಕ್ಕೆ ಸಾಧ್ಯ, ಅದರ ಬಗ್ಗೆ ಕೇಂದ್ರ ಸರಕಾರದವರು ಚರ್ಚೆ ಮಾಡಿದರೆ ಅಥವಾ ಸೂಚನೆಗಳನ್ನು ಕೊಟ್ಟರೆ ಅದು ತಪ್ಪೇನೂ ಇಲ್ಲ, ಅಥವಾ ಅದರಿಂದ ನಮ್ಮ ಮೇಲೆ ಅಧಿಕಾರ ಉಪಯೋಗಿಸಿದಂತಾಗುವುದಿಲ್ಲ. ಪ್ಲಾನಿಂಗ್ ಕಮಿಷನ್ನಿನವರು ಮತ್ತು ಕೇಂದ್ರ ಸರಕಾರದವರು ಈಗಿನ ಪರಿಸ್ಥಿತಿಯಲ್ಲಿ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ರಾಜ್ಯಗಳ ಆದಾಯವನ್ನು ಹೆಚ್ಚು ಮಾಡುವ ದೃಷ್ಟಿಯಿಂದ ಬೇರೆ ಬೇರೆ ರಾಜ್ಯದ ಮುಖ್ಯಮಂತ್ರಿಗಳ ಜೊತೆಗೆ ಮಾತುಕತೆ ನಡೆಸಿದ್ದಾರೆ. ಅದೇ ರೀತಿ ನಮ್ಮ ಮುಖ್ಯ ಮಂತ್ರಿಗಳೂ ಕೂಡ ಅಲ್ಲಿಗೆ ಹೋದಾಗ ಕೆಲವು ಸೂಚನೆಗಳನ್ನು ಮಾಡಿದ್ದಾರೆ ಹೀಗೆ ಸೂಚನೆಗಳನ್ನು ಮಾಡಿದಾಗ ನಮ್ಮ ಮುಖ್ಯ ಮಂತ್ರಿಯವರು ಅವರಿಗೆ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ : ಕರ್ನಾಟಕ ರಾಜ್ಯದಲ್ಲಿ ನಾವು ಏನೇನು ಮಾಡಿದ್ದೇವೆ ಎಂದು. ನಾನ್-ಪ್ಲಾನಿಂಗ್‌ನಲ್ಲಿ ೧೫ ಕೋಟಿ ರೂಪಾಯಿಗಳನ್ನು ಕಟ್ ಮಾಡಿದ್ದೇವೆ ಮತ್ತು ೨೧ ಕೋಟಿ ರೂಪಾಯಿಗಳ ಹೊಸ ಆದಾಯ ಬರುವ ರೀತಿಯಲ್ಲಿ ಧೈರ್ಯವಾಗಿ ತೆರಿಗೆಯನ್ನು ಹಾಕಿದ್ದೇವೆ, ಇದರಿಂದ ನಾವು ಏನೇನು ಮಾಡಲಿಕ್ಕೆ ಸಾಧ್ಯವೋ, ಅದನ್ನೆಲ್ಲಾ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ನಮ್ಮ ಮುಖ್ಯ ಮಂತ್ರಿಗಳು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಆದುದರಿಂದ, ಈ ರೀತಿ ಚರ್ಚೆ ಮಾಡಲಿಕ್ಕೆ ಅವಕಾಶ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಪುನಃ ನಾನು ಸರಕಾರದ ವತಿಯಿಂದ ಹೇಳಬೇಕಾದರೆ, ತೆರಿಗೆ ಹಾಕುವ ನೀತಿ

(ಶ್ರೀ ಎಂ. ವೈ. ಘೋರ್ಪಡೆ)

ಏನಿದೆ, ಅದು ಸಂಪೂರ್ಣವಾಗಿ ರಾಜ್ಯ ಸರಕಾರಗಳಿಗೆ ಸಂಬಂಧಪಟ್ಟಿದ್ದು. ಕೇಂದ್ರ ಸರಕಾರ ನಮಗೆ ಯಾವುದೇ ರೀತಿಯಿಂದ ಆದೇಶ ಕೊಡಲಿಕ್ಕೆ ಬರುವುದಿಲ್ಲ. ಮತ್ತೆ ಆ ರೀತಿ ಕೊಟ್ಟೂ ಇಲ್ಲ. ಇನ್ನು ಮುಂದಾದರೂ ಕೂಡ ನಮ್ಮ ಟ್ಯಾಕ್ಸೇಷನ್ ಪಾಲಿಸಿಯನ್ನು ನಾವೇ ಮಾಡುತ್ತೇವೆ. ಸಧ್ಯಕ್ಕೆ ಬೆಂಗಳೂರ ಬಡ್ಜೆಟ್ ಮಾಡಿ ಹೊಸ ತೆರಿಗೆಯನ್ನು ಜನತೆಯ ಮೇಲೆ ಹಾಕುವ ವಿಚಾರ ನಮ್ಮ ಸರಕಾರಕ್ಕೆ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಕೇಂದ್ರ ಸರಕಾರದಿಂದ ಈ ಬಗ್ಗೆ ಯಾವ ಆದೇಶವೂ ಬಂದಿಲ್ಲವೆಂಬ ಮಾತನ್ನು ಮಾನ್ಯ ಸಚಿವರು ತಿಳಿಸಿದ್ದಾರೆ. ನಾನು ಅದನ್ನು ಒಪ್ಪುತ್ತೇನೆ ಪ್ಲಾನಿಂಗ್ ಕಮಿಷನವರು ಕೊಟ್ಟಿರತಕ್ಕ ಕೆಲವು ಸೂಚನೆಗಳ ಮೇಲೆ ಕೇಂದ್ರ ಸರಕಾರವರು ಒಂದು ವೇಳೆ ಆದೇಶ ಅಲ್ಲದಿದ್ದರೂ ಕೂಡ, ಯಾವುದಾದರೂ ಸೂಚನೆಗಳನ್ನು ರಾಜ್ಯ ಸರಕಾರಕ್ಕೆ ಕೊಟ್ಟಿದ್ದಾರೆಯೇ ?

ಶ್ರೀ ಎಂ. ವೈ. ಘೋರ್ಪಡೆ.—ಸ್ವಾಮಿ, ಅದು ಪತ್ರಿಕೆಯಲ್ಲಿ ಬಂದಿದೆ. ಅದರ ವಿಚಾರದಲ್ಲಿ ಅಗ್ರಿಕಲ್ಚರ್ ಸೆಕ್ಟಾರ್‌ನಲ್ಲಿ ವಾಟರ್‌ರೇಟ್ ಅಥವಾ ಬೆಟರ್‌ಮೆಂಟ್ ಲೆವಿ ಹಾಕುವ ಬಗ್ಗೆ ರಾಜ್ ಸಮಿತಿ ನೇಮಕ ಮಾಡಿದರು. ಅವರು ಅಗ್ರಿಕಲ್ಚರಲ್ ಸೆಕ್ಟಾರ್‌ನಲ್ಲಿ ಸಾಕಷ್ಟು ಟ್ಯಾಕ್ಸೇಷನ್ ಎಲ್ಲಾ ಕಡೆ ಹಾಕಬೇಕು ಎಂದು ಕೆಲವು ಸಲಹೆಗಳನ್ನು ಮಾಡಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಕೆಲವು ಸೆಕ್ಟಾರಗಳಲ್ಲಿ ಎಷ್ಟೆಷ್ಟು ಟ್ಯಾಕ್ಸ್ ಯಾವ ಯಾವ ರಾಜ್ಯಗಳಲ್ಲಿ ಹಾಕಿದ್ದಾರೆ, ಈ ಬಗ್ಗೆ ಚರ್ಚೆ ನಡೆದಿದೆ. ನಾವೂ ಕೂಡ ತಮಗೇ ಗೊತ್ತಿರುವಂತೆ, ಹೋದ ಬಜೆಟಿನಲ್ಲಿ ವಾಟರ್ ರೇಟ್ ಜಾಸ್ತಿ ಮಾಡಿದ್ದೇವೆ ಬೆಟರ್‌ಮೆಂಟ್ ಲೆವಿ ಬಗ್ಗೆ ಆರ್ಡಿನೆನ್ಸ್ ಮಾಡಿದ್ದೇವೆ ಆದೇ ರೀತಿ ಎಲ್ಲೆಲ್ಲಿ ಯಾವ ಯಾವ ಬಾಬುಗಳ ಮೇಲೆ ತೆರಿಗೆ ಹಾಕುವುದಕ್ಕೆ ಸಾಧ್ಯವೋ ಅಲ್ಲೆಲ್ಲ ಹಾಕುತ್ತಿದ್ದೇವೆ ನಮ್ಮ ನೀತಿ ಏನಿದೆ, ಅದನ್ನು ನಮ್ಮ ಮುಖ್ಯ ಮಂತ್ರಿಗಳು ಬಹಳ ಸ್ಪಷ್ಟವಾಗಿ ತಿಳಿಸುವುದಕ್ಕೆ ಒಂದು ಅಸ್ಪದ ಮಾಡಿಕೊಟ್ಟಿದ್ದಾರೆ. ಅದುದರಿಂದ, ನಮ್ಮ ಕರ್ನಾಟಕ ರಾಜ್ಯ ಸರಕಾರದವರಿಗೆ ಅಧಿಕಾರ ಇಲ್ಲ. ಕೇಂದ್ರ ಸರಕಾರದವರು ಹೇಳಿದಂತೆ ಕೇಳಬೇಕು, ಆ ರೀತಿ ಮಾಡಲಿಕ್ಕೆ ಯಾವ ಒಂದು ಅಸ್ಪದ ಇಲ್ಲ ಎಂದು ನಾನು ಪುನಃ ಸ್ಪಷ್ಟವಾಗಿ ಹೇಳುತ್ತೇನೆ.

ALLEGED DANGER TO LIFE AND PROPERTY OF JOINT DIRECTOR

†ಶ್ರೀ. ಬಿ. ಪುಟ್ಟಸ್ವಾಮಯ್ಯ (ರಾಮನಗರ).—ಮಾನ್ಯ ಅಧ್ಯಕ್ಷರೇ, ನಾನು ೫:೬ ದಿವಸಗಳ ಕೆಳಗೆ ಒಂದು ನೋಟೀಸ್ ಕೊಟ್ಟಿದ್ದೇನೆ. ಈ ರಾಜ್ಯದ ಕೈಗಾರಿಕಾ ಇಲಾಖೆಯಲ್ಲಿ ಒಬ್ಬ ಜಾಯಿಂಟ್ ಡೈರೆಕ್ಟರ್ ಆದ ಶ್ರೀಮಾನ್ ಧರ್ಮೇಂದ್ರ ದೇವ್ ಅವರು ಕೆಲಸ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ಪುಟ್ಟಸ್ವಾಮಯ್ಯನವರು ಕಳುಹಿಸಿದ ಸೂಚನೆಯನ್ನು ಸರಕಾರಕ್ಕೆ ಕಳುಹಿಸಿದ್ದೇವೆ. ಅಲ್ಲಿಂದ ಉತ್ತರ ಬಂದಮೇಲೆ ಅಜಂಡಾದಲ್ಲಿ ಹಾಕಿಸುತ್ತೇವೆ. ಈಗಲೇ ಮಾನ್ಯ ಸದಸ್ಯರು ಪರಿಸ್ಥಿತಿ ಹೀಗಿದೆ, ಹಾಗಿದೆ, ಹೀಗಾಗಬೇಕು ಎಂದು ಹೇಳಿದರೆ ಹೇಗೆ ? ಉತ್ತರ ಹೇಳಬೇಕಾದರೆ ನೋಟೀಸು ಕಳುಹಿಸಲೇಬೇಕಾಗಿಲ್ಲ, ಮಾನ್ಯ ಸದಸ್ಯರೇ ನೇರವಾಗಿ ಕೇಳಬಹುದು, ಸರಕಾರದವರು ಉತ್ತರ ಹೇಳಬಹುದು. ಮಾನ್ಯ ಸದಸ್ಯರು ಸೂಚನೆಯನ್ನು ಕಳುಹಿಸಿದ ಮೇಲೆ, ಸರಕಾರದಿಂದ ಅದಕ್ಕೆ ಉತ್ತರ ಬರುವವರೆಗೂ ಅದನ್ನು ಅಜೆಂಡಾದಲ್ಲಿ ಸೇರಿಸಲಾಗುವುದಿಲ್ಲ. ಈಗಲೇ ಎಲ್ಲಾ ಹೆಸರು, ಕುಲ, ಗೋತ್ರಗಳನೂ ಹೇಳಿಬಿಟ್ಟರೆ, ಅದು ಸರಿಹೋಗುವುದಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅವರ ಹೆಂಡತಿ ಮಕ್ಕಳ ಪ್ರಾಣಕ್ಕೆ ಅಪಾಯವಾಗಿದೆ. ಮುಖ್ಯ ಮಂತ್ರಿಗಳು ಇಲ್ಲೇ ಇರುವುದರಿಂದ ನಿಷ್ಕಾಮಂತ ಅಧಿಕಾರಿಗಳ ರಕ್ಷಣೆ ರಾಜ್ಯ ಸರಕಾರ ಮಾಡಬೇಕಾದುದ್ದು ಅವಶ್ಯಕ. ಪ್ರಾಯಶಃ ಮಾನ್ಯ ಮಂತ್ರಿಗಳೂ ಸಹ ಇದನ್ನು ಒಪ್ಪಿಕೊಳ್ಳುತ್ತಾರೆ ಎಂಬ ಭಾವನೆಯಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು.—ಮುಖ್ಯ ಮಂತ್ರಿಯವರಿಗೇ ಹೇಳಬೇಕು.

ಶ್ರೀ ಬಿ. ಪುಟ್ಟಸಾಮಯ್ಯ.—ಅವರು ಸಿಕ್ಕುವುದಿಲ್ಲ. ಅವರ ಮನೆಗೆ ಫೋನ್ ಮಾಡಿದರೂ ಕೂಡ ಅವರು ಅಲ್ಲಿರುವುದಿಲ್ಲ. ಅವರು ಎಲ್ಲಿರುತ್ತಾರೆಂಬುದೇ ಗೊತ್ತಾಗುವುದಿಲ್ಲ. ಮೊದಲು ಸಿಗುತ್ತಿದ್ದರು, ಇತ್ತೀಚೆಗೆ ಸಿಕ್ಕುವುದಿಲ್ಲ. ಆದುದರಿಂದ ನಾನು ಹೇಳುತ್ತಿದ್ದೇನೆ.